**ಓ.ಎಸ್ ನಂಃ 45/2022**

**ಪಿಡಬ್ಲ್ಯೂ-1**

**ದಿಃ 08-07-2026 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ UTH ವಕೀಲರಿಂದಃ**

ನನ್ನ ಮತ್ತು ನನ್ನ ಸಹೋದರರ ನಡುವೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತಹನಾಮೆ 2005 ರಲ್ಲಿ ಆಗಿರುತ್ತದೆ. ದಿನಾಂಕ ಗೊತ್ತಿಲ್ಲ. ಸದರಿ ತಹನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ತಹನಾಮೆಯಲ್ಲಿ ನಾನು ಹೇಳಿರುವ ಎಲ್ಲಾ ಸ್ವತ್ತುಗಳು ವಿಭಾಗಗೊಂಡಿರುತ್ತವೆ. ಸದರಿ ತಹನಾಮೆಯಲ್ಲಿ ಜಮೀನುಗಳಿಗೆ ಸಂಬಂಧಿಸಿದಂತೆ ಬರೆದಿದೆ. ನಾನು ತಹನಾಮೆಯನ್ನು ಓದಿರುತ್ತೇನೆ. ನನ್ನ ಭಾಗಕ್ಕೆ ಬಂದಂತಹ ಆಸ್ತಿಯ ಮೇಲೆ ನಾನು ಯಾವುದೇ ಲೋನ್ ತೆಗೆದಿರುವುದಿಲ್ಲ. ಹಿಸ್ಸೆ ಆದ ನಂತರ ನಾನು ಕೆಲಸ ಬಿಟ್ಟಿರುತ್ತೇನೆ. ಆದರೆ ಸರಿಯಾಗಿ ನೆನಪಿಲ್ಲ. ಯಾವ ತಿಂಗಳಿನಲ್ಲಿ ಕೆಲಸ ಬಿಟ್ಟಿರುತ್ತೇನೆ ನನಗೆ ನೆನಪಿಲ್ಲ. ನಾನು ಸೊಸೈಟಿಯಲ್ಲಿ ನಿವೃತ್ತಿ ಹೊಂದುವ ವೇಳೆಗೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ಸೊಸೈಟಿಯಲ್ಲಿ ಹಣಕಾಸಿನ ವ್ಯವಹಾರ ನಡೆಯುತ್ತಿತ್ತು ಎಂದರೆ ಸರಿ. ನಾನು ಕಾರ್ಯದರ್ಶಿಯಾಗಿ 20 ವರ್ಷ ಕೆಲಸ ಮಾಡಿರುತ್ತೇನೆ. ನನ್ನ ಊರು ಕೂಡ ಸದರಿ ಸೊಸೈಟಿ ವ್ಯಾಪ್ತಿಗೆ ಬರುತ್ತಿತ್ತು. ನಾನು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ನಮ್ಮ ಕುಟುಂಬಲ್ಲಿ ಸಾಲ ತೆಗೆಯಲಿಲ್ಲ. ನಮ್ಮ ಕುಟುಂಬದಲ್ಲಿ ಒಬ್ಬರಾದ ಶ್ರೀನಿವಾಸಗೌಡರವರು ನಮ್ಮ ಸೊಸೈಟಿಯಲ್ಲಿ ಸಾಲ ತೆಗೆದುಕೊಂಡಿದ್ದರು. ಆ ಸಮಯದಲ್ಲಿ ಗ್ರಾಹಕರಿಂದ ನಾವು ಪಹಣಿ ತೆಗೆದುಕೊಳ್ಳುತ್ತಿದ್ದೆವು. ನಾನು ನಿವೃತ್ತಿ ಹೊಂದುವ ಮುಂಚೆಯೇ ನಮ್ಮ ಅಣ್ಣನವರು ಸದರಿ ಸಾಲ ತೀರಿಸಿದ್ದರು. ಸಾಲವು ತೀರುವಳಿ ಆಗಿತ್ತು. ನಮ್ಮ ಮನೆಯ ಜವಾಬ್ದಾರಿಯನ್ನು ಕುಟುಂಬದ ಪರವಾಗಿ ನಮ್ಮ ಅಣ್ಣನೇ ನೋಡಿಕೊಳ್ಳುತ್ತಿದ್ದರು. ಹಿಸ್ಸೆಯನ್ನು ಪಡೆಯದೆ 2005 ರ ಹಿಂದೆ ನಮ್ಮ ಕುಟುಂಬ ವರ್ಗದವರು ಬೇರೆಬೇರೆಯಾಗಿ ವಾಸ ಮಾಡುತ್ತಿರಲಿಲ್ಲ. ಎಸ್ ಬಿ ಎಂ ಬ್ಯಾಂಕಿನ ವ್ಯಾಪ್ತಿಗೆ ಕೈಮರ ಬ್ರಾಂಚ್ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದವರ ಮನೆಯ ನಿರ್ವಹಣೆಗಾಗಿ ನಮ್ಮ

ಅಣ್ಣನವರು ಬ್ಯಾಂಕಿನಲ್ಲಿ ಸಾಲ ಪಡೆದಿದ್ದರು. ಸಾಕ್ಷಿ ಮುಂದುವರಿದು ಅದನ್ನು ಮರುಪಾವತಿ ಮಾಡಿದ್ದರು ಎನ್ನುತ್ತಾರೆ. ಕುಟುಂಬದ ಪರವಾಗಿ ಕರ್ತನಾಗಿ ನನ್ನ ಅಣ್ಣನವರೇ ಸಾಲ ಪಡೆದಿದ್ದರು ಮತ್ತು ಸಾಲ ಕಟ್ಟುತ್ತಿದ್ದರು. ನಮ್ಮ ಅಣ್ಣನವರು ಎಲ್ಲೆಲ್ಲಿ ಸಾಲಪಡೆದಿದ್ದರು ನನಗೆ ಗೊತ್ತಿಲ್ಲ. ನಮ್ಮ ಅಣ್ಣ ಮತ್ತು ಅತ್ತಿಗೆಯವರು ಬೋಗಾರುಕೊಪ್ಪ ಗ್ರಾಮದಲ್ಲಿ ವಾಸಮಾಡಿಕೊಂಡಿರುತ್ತಾರೆ. ಆದರೆ ಸ.ನಂ. ನನಗೆ ಗೊತ್ತಿಲ್ಲ. ಅದು ಹಂಚು ಮತ್ತು ಆರ್ ಸಿ ಸಿ ಎರಡರ ವ್ಯಾಪ್ತಿಯಲ್ಲಿ ಬರುತ್ತಿತ್ತು. ಗ್ರೌಂಡ್ ಫ್ಲೋರ್ ಆರ್ ಸಿ ಸಿ ಆಗಿದ್ದು, ಮೊದಲನೇ ಅಂತಸ್ತು ಮೇಲ್ಛಾವಣಿಯು ಮಂಗಳೂರು ಹಂಚಿನಿಂದ ಕೂಡಿರುತ್ತದೆ. ನಾನು ಮತ್ತು ನಮ್ಮ ಅಣ್ಣ ಇಬ್ಬರೂ ವಾಸ ಮಾಡಿರಿಕೊಂಡಿರುವ ಮನೆಯು 50 ಅಡಿ ಅಗಲ, 25 ಅಡಿ ಉದ್ದ ಇತ್ತು. ಸದರಿ ಮನೆಯನ್ನು ನಾನು ಮತ್ತು ನನ್ನ ಅಣ್ಣ ಇಬ್ಬರೂ ವಾಸ ಮಾಡುವಂತೆ ಕಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಮನೆಯ 25 * 25 ಅಳತೆಯ ಮಧ್ಯ ಭಾಗದಲ್ಲಿ ಗೋಡೆ ಕಟ್ಟಿ ನನ್ನ ಅಣ್ಣ ಮತ್ತು ನಾನು ಇಬ್ಬರೂ ಬೇರೆ ಬೇರೆಯಾಗಿ ವಾಸಮಾಡಿಕೊಂಡಿದ್ದೆವು. ಸದರಿ ಭಾಗದಲ್ಲಿದ್ದಂತಹ ನನ್ನ ಮನೆಗೆ ಅವರ ಮನೆಯಲ್ಲಿ ಯಾವ ಯಾವ ವ್ಯವಸ್ಥೆ ಇತ್ತೋ ಅದೇರೀತಿ ಇದೆ. ಸಾಕ್ಷಿ ಮುಂದುವರಿದು ಹೆಗ್ಗೋಡಿನಲ್ಲಿ ನನ್ನ ಹೆಸರಿನಲ್ಲಿದ್ದ ನಿವೇಶನವನ್ನು ಮಾರಿ ಮನೆ ಕಟ್ಟಲು ನಮ್ಮ ಅಣ್ಣನಿಗೆ ನಾನು ಸಹ ಹಣದ ಸಹಾಯ ಮಾಡಿರುತ್ತೇನೆ. ಸದರಿ ನಿವೇಶನವನ್ನು ಬಸಗೇರಿ ರವಿ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ. ಮನೆಯ ಸಮಸ್ತ ನಿರ್ವಹಣೆಯನ್ನು ನಮ್ಮ ಅಣ್ಣನವರೇ ನಿರ್ವಹಣೆ ಮಾಡುತ್ತಿದ್ದರು. ಬಸಗೇರಿ ರವಿರವರಿಗೆ ಮಾರಾಟ ಮಾಡಿದಂತಹ ನಿವೇಶನದ ಹಕ್ಕುಪತ್ರ ನನ್ನ ಹೆಸರಿಗೆ ಇತ್ತು. ನನ್ನ ಹೆಸರಿಗೆ ಇದ್ದಂತಹ ನಿವೇಶನವನ್ನು ಮಾರಿ ಅಣ್ಣನಿಗೆ ಸಹಾಯ ಮಾಡಿರುತ್ತೇನೆ. ಸದರಿ ನಿವೇಶನದ ಬೆಲೆ ರೂ.2,50,000/- ಆಗಿದ್ದು, ಸದರಿ ಎಲ್ಲಾ ಹಣ ನಮ್ಮ ಅಣ್ಣನಿಗೆ ನೀಡಿರುತ್ತೇನೆ. ಹಕ್ಕುಪತ್ರವಾಗಲೀ ನಿವೇಶನವಾಗಲೀ ನನ್ನ ಹೆಸರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸೈಟು ಕುಟುಂಬದ ಹೆಸರಿಗೆ ಮಂಜೂರಾದ ಸೈಟು ಎಂದರೆ ಸರಿಯಲ್ಲ. ಸದರಿ ನಿವೇಶನಕ್ಕೆ ಹಕ್ಕುಪತ್ರ ಕೊಟ್ಟಿದ್ದರು. ಕುಟುಂಬದ ಪರವಾಗಿ ಮಂಜೂರಾತಿ ಮಾಡಲಾಗಿದೆ ಎಂದು ಸರ್ಕಾರದಿಂದ ಆದೇಶ

ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ಅಣ್ಣನವರ ನಿವೇಶನ ನನ್ನ ನಿವೇಶನ ಬೇರೆ ಬೇರೆ ಎಂದು ಹೇಳುತ್ತಾರೆ. ಸದರಿ ಜಾಗದಲ್ಲಿ ಬೆಳೆದಂತಹ ಅಡಿಕೆಯನ್ನು ನಮ್ಮ ಅಣ್ಣ ಮಂಡಿಗೆ ಹಾಕುತ್ತಿದ್ದರು. ಗುಂಡ್ಲುಮನೆ ನರಸಿಂಹಯ್ಯ ಮತ್ತು ಕೋ ಅರೇಕಾನಟ್ ಶಿವಮೊಗ್ಗ ಇವರಿಗೆ ಕುಟುಂಬದ ಅಡಿಕೆಯನ್ನು ಹಾಕುತ್ತಿದ್ದೆವು.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ-3 ರಲ್ಲಿ ಪಿ ಎಲ್ ಡಿ ಬ್ಯಾಂಕಿನಲ್ಲಿ ಲೋನ್ ಮತ್ತು ವಿ ಎಸ್ ಎಸ್ ಎನ್ ಮೇಗರವಳ್ಳಿ ಸೊಸೈಟಿಯಲ್ಲಿ ಆ ರೀತಿಯಾದ ಬರವಣಿಗೆ ಆಗಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ತಹನಾಮೆ ಇರುತ್ತದೆ. ಸದರಿ ತಹನಾಮೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ ನಿಪಿ-30 ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸದರಿ ದಾಖಲೆಗಳಲ್ಲಿ ಹಿಸ್ಸಾ ತಹನಾಮೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿಸಿ ಸರಿಯಿದೆ.

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**